ಚಿತ್ರಮಂದಿರಗಳಿಗೆ ಸಿನಿಮಾವನ್ನು ವಿಸ್ತರಿಸಿದರು. ಒಂಬತ್ತನೇ ದಿನದಿಂದ ಚಿತ್ರಮಂದಿರಕ್ಕೆ ಜನರು ಬರಲು ಶುರುಮಾಡಿದರು. ನಂತರದ 35 ದಿನಗಳು ಚಿತ್ರ ಹಲವು ಚಿತ್ರಮಂದಿರಗಳಲ್ಲಿ ಹೌಸ್‌ಫುಲ್ ಆಗಿ ಓಡಿತು. ಮತ್ತೊಂದು ವಾರದಲ್ಲೇ ಅಮೆಜಾನ್ ಪ್ರೈಮ್‌ನಲ್ಲೂ ಬಿಡುಗಡೆಗೊಂಡು ಸಾಕಷ್ಟು ಚರ್ಚೆಗೆ ಒಳಗಾಯಿತು.

‘ನಾವು ಸೆನ್ಸಿಬಲ್ ಆಗಿದ್ದರಷ್ಟೇ ಸೆನ್ಸಿಬಲ್ ಸಿನಿಮಾ ಮಾಡಲು ಸಾಧ್ಯ. ಯಾಕೆಂದರೆ ಅದು ಹೊರಜಗತ್ತಿನಲ್ಲಿ ರೂಪುಗೊಳ್ಳುವ ಮೊದಲು ನಮ್ಮ ಮನಸ್ಸಿನಲ್ಲಿಯೇ ಹೊಳೆಯಬೇಕಲ್ಲವೇ?’ ಎಂದು ನಗುವ ಕೃಷ್ಣ, ಈಗ ‘ಲವ್ ಮಾಕ್ಟೇಲ್ 2’ ಕಥೆಯನ್ನು ಸಿದ್ಧಪಡಿಸಿಕೊಂಡು ಚಿತ್ರೀಕರಣಕ್ಕೆ ಸಜ್ಜಾಗಿದ್ದಾರೆ.

‘ಆ ಸಿನಿಮಾ ಮುಗಿದಲ್ಲಿಂದಲೇ ಈ ಕಥೆ ಶುರುವಾಗುತ್ತದೆ. ಲವ್ ಮಾಕ್ಟೇಲ್‌ನಲ್ಲಿದ್ದ ಮೂರು ಪಟ್ಟು ಹ್ಯೂಮರ್ ಈ ಸಿನಿಮಾದಲ್ಲಿ ಇರುತ್ತದೆ. ಅದರಲ್ಲಿ ಆಗತಾನೆ ಮದುವೆಯಾದವರಿಗೆ ಹತ್ತಿರುವಾಗುವ ದಾಂಪತ್ಯ ಬದುಕನ್ನು ತೋರಿಸಿದ್ದೆವು. ಈ ಭಾಗದಲ್ಲಿ ನಲ್ವತ್ತರಿಂದ ಎಪ್ಪತ್ತು ವಯಸ್ಸಿನವರಿಗೂ ಆಪ್ತವಾಗುವ ಬದುಕನ್ನು ತೋರಿಸುತ್ತೇವೆ’ ಎನ್ನುವ ಕೃಷ್ಣ ಕಥೆಯ ಸುಳಿವನ್ನು ಮಾತ್ರ ಬಿಟ್ಟುಕೊಡುವುದಿಲ್ಲ.

‘ಈ ಸಿನಿಮಾದಲ್ಲಿಯೂ ಮಿಲನಾ ನಾಗರಾಜ್ ನಟಿಸುತ್ತಿದ್ದಾರೆಯೇ?’ ಎಂದು ಕೇಳಿದರೆ, ‘ಅದೇ ಪಾತ್ರದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಇದರಲ್ಲಿ ತುಂಬ ಸರ್ಪ್ರೈಸ್‌ಗಳಿವೆ, ಕಾದು ನೋಡಿ’ ಎಂದು ಕುತೂಹಲದ ಒಗ್ಗರಣೆ ಹಾಕುತ್ತಾರೆ.

‘ಲವ್ ಮಾಕ್ಟೇಲ್ 2’ ಹೊರತಾಗಿ ಕೃಷ್ಣ, ನಾಗಶೇಖರ್ ನಿರ್ದೇಶನದ ‘ಶ್ರೀಕೃಷ್ಣ ಅಟ್ ಜಿಮೇಲ್.ಕಾಮ್’ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಹಾಗೆಯೇ ‘ವರ್ಜಿನ್’ ಎನ್ನುವ ಇನ್ನೊಂದು ಸಿನಿಮಾದಲ್ಲಿಯೂ ನಟಿಸುತ್ತಿದ್ದಾರೆ.

‘ಲವ್ ಮಾಕ್ಟೇಲ್’ ಸಿನಿಮಾದ ಬಹುತೇಕ ಭಾಗ ನಾನು ನಿಜಜೀವನದಲ್ಲಿ ಕಂಡಿದ್ದೇ ಆಗಿತ್ತು. ಆದರೆ ಈಗ ಕಾಲ್ಪನಿಕವಾಗಿ ಕಟ್ಟಬೇಕಾಗಿದೆ. ಅದೊಂದು ಸವಾಲು. ಬೇರೆ ಸಿನಿಮಾ ಮಾಡುವುದು ಸುಲಭ. ಇದನ್ನೇ ಮುಂದುವರಿಸುವ ಸವಾಲನ್ನು ಎದುರಿಸಲು ನಿರ್ಧರಿಸಿದ್ದೇನೆ’ ಎಂದು ಆತ್ಮವಿಶ್ವಾಸದಿಂದ ನುಡಿಯುವ ಕೃಷ್ಣ ಅವರ ‘ಲವ್ ಮಾಕ್ಟೇಲ್ 2’ ಪ್ರೇಕ್ಷಕರಿಗೂ ಗುಂಗು ಹಿಡಿಸುವುದೇ ಎಂದು ಕಾದುನೋಡಬೇಕು. ■

# ರಿಷಿ ಜಲಕಾಳಜಿ

ರಿಷಿ ವಿಭಿನ್ನ ಸಿನಿಮಾಗಳು ಮತ್ತು ವಿಶಿಷ್ಟ ಮ್ಯಾನರಿಸಂನ ನಟನೆಯ ಮೂಲಕ ಗಮನಸೆಳೆದಿರುವ ಯುವನಟ. ನಟನೆಯ ಜೊತೆಗೆ ಓದು ಬರಹಗಳೂ ರಿಷಿ ಏಕಾಂತದ ಸಂಗಾತಿಗಳು. ಹಾಗಾಗಿ ಸಹಜವಾಗಿಯೇ ಅವರ ಮನಸ್ಸು ಸುತ್ತಲಿನ ಸಮಾಜದ ವಿದ್ಯಮಾನಗಳಿಗೆ ಬೇಗ ಸ್ಪಂದಿಸುತ್ತದೆ. ಅವರ ಸಂವೇದನಾಶೀಲತೆಯ ಬಗ್ಗೆ ಈಗ ಮಾತನಾಡಲೂ ಕಾರಣವಿದೆ. ಅವರು ಬೆಂಗಳೂರಿನ ನೀರಿನ ಸಮಸ್ಯೆಗಳಿಗೆ ಸಂಬಂಧಿಸಿದ ವಿಡಿಯೊ ಒಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ.



ಸಾಮಾನ್ಯವಾಗಿ ‘ಸಂದೇಶ’ ದಾಟಿಸುವ ಮಾತುಗಳನ್ನು ಆಡುವಾಗ ಸೆಲೆಬ್ರಿಟಿಗಳಿಗೆ ಆ ಸಂದೇಶದ ಅಗತ್ಯಕ್ಕಿಂತಲೂ ತಮ್ಮ ಇಮೇಜ್ ಬಗ್ಗೆಯೇ ಹೆಚ್ಚು ಗಮನವಿರುತ್ತದೆ. ಹಾಗಾಗಿಯೇ ಆ ವಿಷಯದ ಬಗ್ಗೆ ಜ್ಞಾನವೇ ಇಲ್ಲದೇ ಯಾರೋ ಒಪ್ಪಿಸಿದ ಗಿಳಿಪಾಠವನ್ನು ಒಪ್ಪಿಸುವುದೇ ಹೆಚ್ಚು. ಆದರೆ ರಿಷಿಯ ವಿಷಯದಲ್ಲಿ ಹಾಗಾಗಿಲ್ಲ.

ಐದೂವರೆ ನಿಮಿಷದ ವಿಡಿಯೊದಲ್ಲಿ ಅವರ ವಿಷಯಜ್ಞಾನ ಮತ್ತು ಸಿದ್ಧತೆ ಎದ್ದು ಕಾಣುತ್ತದೆ. ಕಳೆದ ವರ್ಷ ಚೆನ್ನೈನಲ್ಲಿ ಅಂತರ್ಜಲ ಮಟ್ಟ ಕುಸಿದು ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದನ್ನು ನೆನಪಿಸುತ್ತಲೇ ಮಾತಿಗಾರಂಭಿಸಿರುವ ರಿಷಿ, ಬೆಂಗಳೂರಿನ ಪರಿಸ್ಥಿತಿಯ ಬಗ್ಗೆಯು ಗಮನ ಸೆಳೆದಿದ್ದಾರೆ. ಅದಕ್ಕಾಗಿ ನೀತಿ ಆಯೋಗ ಮತ್ತು ಬಿ.ಬಿ.ಸಿ.ಯ ವರದಿಗಳನ್ನೂ ಉಲ್ಲೇಖಿಸಿದ್ದಾರೆ. ಸಾಕಷ್ಟು ಮಳೆಯಾಗಿಯೂ ಅದನ್ನು ನೆಲದಲ್ಲಿ ಇಂಗಿಸಿಕೊಳ್ಳಲು ಸಾಧ್ಯವಾಗದ ನಮ್ಮ ನಗರರಚನೆಯ ಬಗ್ಗೆಯೂ ಮಾತಾಡಿದ್ದಾರೆ. ಬೆಂಗಳೂರಿನಲ್ಲಿ ಪ್ರತಿವರ್ಷ ನಗರದ ಅಗತ್ಯದ ಎರಡರಷ್ಟು ನೀರು ಆಕಾಶದಿಂದ ಸುರಿಯುತ್ತದೆ. ಆದರೆ ನಾವು ದೂರದ ಕಾವೇರಿಯಿಂದ ಎಷ್ಟೋ ಹಣ, ಶ್ರಮ, ಸಂಪನ್ಮೂಲಗಳನ್ನು ಖರ್ಚು ಮಾಡಿಕೊಂಡು ನೀರು ತರುತ್ತಿರುವುದು ವ್ಯಂಗ್ಯವಲ್ಲದೇ ಇನ್ನೇನು ಎನ್ನುವುದು ಅವರ ಮಾತು. ಬೆಂಗಳೂರು ಜಲಸಮಸ್ಯೆಯ ಬಗ್ಗೆ ಅವರು ನಡೆಸಿರುವ ಅಧ್ಯಯನ, ಪರಿಹಾರದ ದಾರಿಗಳ ಕುರಿತ ವಿಶ್ಲೇಷಣೆ ಎಲ್ಲವೂ ಗಮನಸೆಳೆಯುವಂತಿದೆ. ಮಳೆಗಾಲದ ನಡುವಿನಲ್ಲಿರುವಾಗ ಇದು ಸಕಾಲಿಕವಾಗಿಯೂ ಕಾಣುತ್ತದೆ. ■

# ಜಗ್ಗಣ್ಣನ ಸಾಹಿತ್ಯ!

ಅತ್ತ ರಾಜಕೀಯದಿಂದಲೂ ತುಸು ದೂರ ಉಳಿದು, ಇತ್ತ ಚಿತ್ರರಂಗವೂ ಸ್ಥಗಿತಗೊಂಡಿರುವುದರಿಂದ ಜಗ್ಗೇಶ್ ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯರಾಗಿದ್ದಾರೆ. ಪ್ರತಿದಿನವೂ ಟ್ವೀಟ್ ಮಾಡಿ ತಾವು ಇರುವ ಜಾಗ, ಅಲ್ಲಿ ಏನು ಮಾಡುತ್ತೇನೆ, ಹೇಗಿದ್ದೇನೆ ಎಂಬೆಲ್ಲ ವಿವರಗಳನ್ನು ಅಭಿಮಾನಿಗಳಿಗೆ ತಿಳಿಸುತ್ತಿದ್ದಾರೆ.

ಸಾಮಾನ್ಯವಾಗಿ ಸೋಷಿಯಲ್ ಮೀಡಿಯಾದ ಗಲ್ಲಿಗೆ ಇಳಿದ ತಕ್ಷಣವೇ ಸಿನಿಮಾಮಂದಿಗೆ ತಮ್ಮ ಮಾತೃಭಾಷೆ ಮರೆತುಹೋಗುತ್ತದೆ. ಅನಾಯಾಸವಾಗಿ ಇಂಗ್ಲಿಷ್ ಸ್ಫುರಿಸತೊಡಗುತ್ತದೆ. ಕನ್ನಡದವರೇ ಆಗಿ, ಕನ್ನಡದಲ್ಲೇ ಸಿನಿಮಾ ಮಾಡಿ, ಕನ್ನಡಿಗರಾದ ತಮ್ಮ ಅಭಿಮಾನಿಗಳ ಜೊತೆಗೆ ಸೋಷಿಯಲ್ ಮೀಡಿಯಾದಲ್ಲಿ ಸಂವಾದಿಸುವಾಗ ಮಾತ್ರ ಚಕ್ಕನೆ ಇಂಗ್ಲಿಷ್ ಕೂಲಿಂಗ್ ಗ್ಲಾಸ್ ಏರಿಸುವ ಅವರ ವೈಭೋಗದ ಕುರಿತು ಏನು ಹೇಳೋಣ?



ಜಗ್ಗಣ್ಣ ಹಾಗಲ್ಲ, ಅವರು ಯಾವಾಗಲು ಜವಾರಿ. ರಾಯರಿಗೆ ಮಾಡಿದ ಅಲಂಕಾರದಿಂದ ಹಿಡಿದು, ನೆಚ್ಚಿನ ನಾಯಿ ತೀರಿಕೊಂಡ ಸುದ್ದಿಯವರೆಗೂ ಅವರ ಅಭಿವ್ಯಕ್ತಿಗೆ ಒದಗಿಬರುವುದು ಕನ್ನಡವೇ. ಕ್ಯಾಮೆರಾ ಎದುರಷ್ಟೇ ಅಲ್ಲ, ಸೋಷಿಯಲ್ ಮಿಡಿಯಾ ವೇದಿಕೆಯ ಮೇಲೂ ಅವರು ಅಪ್ಪಟ ಕನ್ನಡಿಗ.

ಜಗ್ಗೇಶ್ ಅವರ ನಟನೆಯ ಮ್ಯಾನರಿಸಂ ಎಷ್ಟು ಪ್ರಭಾವಿಯಾದದ್ದು ಎಂದರೆ ಅವರ ಮುಖ ನೋಡಿದರೆ ಸಾಕು, ನಗೆಯುಕ್ಕುತ್ತದೆ. ಅವರು ಉಭಯಕುಶಲೋಪರಿ ಮಾತನಾಡುತ್ತಿದ್ದರೂ ಹಾರುವ ಹುಬ್ಬುಗಳು, ತುಟಿಗಳ ವಿಶಿಷ್ಟ ಚಲನೆ, ಕೈಗಳ ಹೊರಳುವಿಕೆಗಳೆಲ್ಲ ನಮ್ಮಲ್ಲಿ ಅವರ ಯಾವುದೋ ಸಿನಿಮಾ ಪಾತ್ರವನ್ನೇ ನೆನಪಿಸಿ ನಗುವಂತೆ ಮಾಡುತ್ತವೆ. ಜಗ್ಗಣ್ಣನ ಸೋಷಿಯಲ್ ಮೀಡಿಯಾ ಬರಹಗಳೂ ಇದಕ್ಕೆ ಹೊರತಲ್ಲ.

ಅಲ್ಲೇನು ಕಾಮಿಡಿ ಇರಲು ಸಾಧ್ಯ? ಜಗ್ಗಣ್ಣನ ಮಾತಿನಲ್ಲಿನ ಸಮೃದ್ಧ ಕನ್ನಡ ಬರಹಕ್ಕೆ ಇಳಿಯುವಷ್ಟರಲ್ಲಿ ಸಾಕಷ್ಟು ಕಾಗುಣಿತ ದೋಷಗಳು ನುಸುಳುತ್ತವೆ. ಅಲ್ಲಿ ನಂದಗೋಕುಲ ‘ನಂದಕೋಕುಲ’ ಆಗಿರುತ್ತದೆ. ಸೃಷ್ಟಿ, ‘ಶೃಷ್ಟಿ’ ಆಗುತ್ತದೆ. ಅವುಗಳನ್ನೆಲ್ಲ ಜಗ್ಗೇಶ್ ಡೈಲಾಗ್ ಶೈಲಿಯಲ್ಲಿ ಓದಿಕೊಂಡಾಗ ಸಿಗುವ ಮಜವೇ ಬೇರೆ.

ಇದೆಲ್ಲದರ ಹೊರತಾಗಿಯೂ, ಮೊದಲಿನಿಂದಲೂ ಕನ್ನಡ ಸಿನಿಮಾ, ಚಿತ್ರರಂಗದ ಒಳಿತಿನ ಹೋರಾಟದಲ್ಲಿ ಮುಂದಿನ ಸಾಲಿನಲ್ಲಿಯೇ ಇರುತ್ತಿದ್ದ ಅವರು, ಈಗ ಆನ್‌ಲೈನ್‌ನಲ್ಲಿ ಕನ್ನಡವನ್ನೇ ಬಳಸುತ್ತಿರುವ ನಟರ ಸಾಲಿನಲ್ಲಿಯೂ ಮುಂಚೂಣಿಯಲ್ಲಿರುವುದಂತೂ ಮೆಚ್ಚುಗೆಯ ಸಂಗತಿಯೇ ಸರಿ. ■